ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :
16/12/20

# ದೊಡ್ಡವರ ಸಣ್ಣಾಟ

## ಸಭಾಪತಿ ಪೀಠ ಸ್ವಾಧೀನಕ್ಕೆ ಮಾರಾಮಾರಿ

ಸಂ.ಕ.ಸಮಾಚಾರ ಬೆಂಗಳೂರು

ಇತಿಹಾಸದಲ್ಲಿಯೇ ಕಂಡು ಕೇಳರಿಯದ ಗದ್ದಲ, ಕೋಲಾಹಲಕ್ಕೆ ವಿಧಾನ ಪರಿಷತ್ ಮಂಗಳವಾರ ಸಾಕ್ಷಿಯಾಯಿತು. ಆಡಳಿತಪಕ್ಷ ಹಾಗೂ ವಿಪಕ್ಷಗಳ ಸದಸ್ಯರ ನಡುವೆ ತಳ್ಳಾಟ-ನೂಕಾಟ, ಅವಾಚ್ಯ ಪದಗಳ ನಿಂದನೆ, ಸದಸ್ಯರ ಕೈ-ಕೈ ಮಿಲಾವಣೆಗೆ ಚಿಂತಕರ ಚಾವಡಿ ಎನಿಸಿರುವ ಮೇಲ್ಮನೆ ಸಾಕ್ಷಿಯಾಯಿತು.

ಪರಿಷತ್ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಪ್ರಸ್ತಾಪ ಗಲಾಟೆಗೆ ಕಾರಣವಾಯಿತು. ಸದಸ್ಯರಿಂದ ಸಭಾಪೀಠ ಧ್ವಂಸಕ್ಕೆ ಪ್ರಯತ್ನ ನಡೆದಿದ್ದು, ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಇಂದಿನ ಘಟನೆಯಿಂದ ಕೇವಲ ರಾಜ್ಯಕ್ಕಷ್ಟೇ ಅಲ್ಲ ದೇಶಕ್ಕೆ ಕೆಟ್ಟ ಸಂದೇಶ ನೀಡಿದಂತಾಗಿದ್ದು, ಪ್ರಮುಖ ರಾಜಕೀಯ ಪಕ್ಷಗಳು ಮಾತ್ರ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿದೆ.

ಮಂಗಳವಾರ ಸದನ ಆರಂಭಕ್ಕೆ ಮುನ್ನ, ಸಭಾಪತಿ ಸ್ಥಾನದಲ್ಲಿ ಪರಿಷತ್ ನಡಾವಳಿಗೆ ವಿರುದ್ಧವಾಗಿ ಬಿಜೆಪಿ ಉಪಸಭಾಪತಿಯನ್ನು ಕುಳ್ಳಿರಿಸಿದೆ ಎಂಬ ಅಂಶ ಗದ್ದಲಕ್ಕೆ ಕಾರಣವಾಯಿತು. ಇದರಿಂದ ಕೆರಳಿದ ಕಾಂಗ್ರೆಸ್ ಸದಸ್ಯರು ಉಪಸಭಾಪತಿ ಧರ್ಮೇಗೌಡರನ್ನು ಪೀಠದಿಂದ ಎಳೆದುಹಾಕಿದರು. ಈ ವೇಳೆ ಆಡಳಿತ ಹಾಗೂ ವಿಪಕ್ಷದ ಸದಸ್ಯರ ನಡುವೆ ತಳ್ಳಾಟ, ನೂಕಾಟ ನಡೆಯಿತು. ಗಲಾಟೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಉಪ ಸಭಾಪತಿ ಧರ್ಮೇಗೌಡ ಅವರನ್ನು

- ಒಡೆದ ಗಾಜು, ಮುರಿದ ಮೈಕ್, ಹರಿದ ಪತ್ರ
- ಸಂಸದೀಯ ವ್ಯವಸ್ಥೆಗೆ ಕಲಾಪ ಕಪ್ಪುಚುಕ್ಕೆ
- ಪೀಠದಿಂದ ಉಪಸಭಾಪತಿಯ ಎಳೆದಾಟ
- ಸದಸ್ಯರ ನಡುವೆ ತಳ್ಳಾಟ, ಕೈ ಮಿಲಾವಣೆ
- ಸದಸ್ಯರಿಂದಲೇ ಮೇಲ್ಮನೆ ಮಾನ ಹರಾಜು
- ಮೂಕಪ್ರೇಕ್ಷಕರಾದ ಸದನದ ಮಾರ್ಷಲ್
- ಹಿರಿಯ ಸದಸ್ಯರ ಮನವಿಗೆ ಸಿಗದ ಗೌರವ
- ಸಭಾಧ್ಯಕ್ಷರ ಪೀಠದ ಗೌರವ ಮಣ್ಣುಪಾಲು
- ಕಡತ ಸೇರದ ಕಲಾಪದ ವಿದ್ಯಮಾನಗಳು

ರಕ್ಷಿಸಿ ಆಸನಕ್ಕೆ ಕರೆತರಲಾಯಿತು.

ಈ ವೇಳೆ ಬಿಜೆಪಿ ಸದಸ್ಯರು ಸಭಾಧ್ಯಕ್ಷರು ಸದನ ಪ್ರವೇಶಿಸುವ ಬಾಗಿಲನ್ನು ಮುಚ್ಚಿದರೆ, ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯ ನಜೀರ್ ಅಹಮದ್ ಬಾಗಿಲಿಗೆ ಒದ್ದ ಘಟನೆಯೂ ನಡೆಯಿತು. ಈ ನಡುವೆ ಮಾರ್ಷಲ್‌ಗಳ ಕೊರಳಪಟ್ಟಿಗೂ ಸದಸ್ಯರು ಕೈಹಾಕಿದ ಘಟನೆ ನಡೆದಿದೆ. ಸದಸ್ಯರ ನಡುವೆ ಕೈ-ಕೈ ಮಿಲಾಯಿಸುವ ಹಂತಕ್ಕೆ ಹೋಗಿ, ಕೆಳಗೆ ಬಿದ್ದ ಘಟನೆಯೂ ನಡೆಯಿತು. ಬಳಿಕ ಕಾಂಗ್ರೆಸ್ ಸದಸ್ಯ ಚಂದ್ರಶೇಖರ್ ಪಾಟೀಲ್ ಅವರನ್ನು ಪೀಠದಲ್ಲಿ ಕೂರಿಸಿದರು. ಈ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರು ಪರಸ್ಪರ ಧಿಕ್ಕಾರ ಘೋಷಣೆ ಕೂಗಿದರು. ಬಳಿಕ ಮಾರ್ಷಲ್‌ಗಳ ರಕ್ಷಣೆಯಲ್ಲಿ ಬಂದ ಸಭಾಪತಿ ಪ್ರತಾಪ್‌ಚಂದ್ರಶೆಟ್ಟಿ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿ ಬಂದಷ್ಟೇ ವೇಗದಲ್ಲಿ ಹಿಂದಿರುಗಿದರು.

ಮಂಗಳವಾರ ಕಲಾಪದ ಯಾವುದೇ ವಿಷಯ ಕಡತ ಸೇರದಿರುವುದು ವಿಶೇಷ. ಬಳಿಕ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ವಿಧಾನಸೌಧದಲ್ಲಿ ಸಭೆ ಸೇರಿ ಮುಂದಿನ ನಡೆ ಬಗ್ಗೆ ಚರ್ಚಿಸಿದರು. ಜೆಡಿಎಸ್ ಅವಿಶ್ವಾಸ ನಿರ್ಣಯಕ್ಕೆ ಬೆಂಬಲಿಸಿ ಸದಸ್ಯರ ಸಹಿ ಇರುವ ಪತ್ರವನ್ನು ನೀಡಿತು. ರಾಜ್ಯಪಾಲರಿಗೂ ನೀಡಲಾಗಿದೆ. ಕಾಂಗ್ರೆಸ್ ಪಕ್ಷ ಕೂಡಾ ಸದನದ ವಿದ್ಯಮಾನಗಳು ಬಿಜೆಪಿ ಸಂವಿಧಾನಕ್ಕೆ ಮಾಡಿದ ಅಪಚಾರ, ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಕಿಡಿಕಾರಿದೆ.



ಸಭಾಪತಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ್ದ ಬಿಜೆಪಿ ಸದಸ್ಯರು ಸಭಾಪತಿ ಪೀಠದಲ್ಲಿ ಉಪಸಭಾಪತಿಗಳನ್ನು ಕುಳ್ಳಿರಿಸಿದಾಗ ಆಕ್ಷೇಪಿಸಿದ ಕಾಂಗ್ರೆಸ್ ಸದಸ್ಯರು ಉಪಸಭಾಪತಿಗಳನ್ನು ಅಲ್ಲಿಂದ ಪಕ್ಕಕ್ಕೆ ಎಳೆಯಲು ಮುಂದಾದರು.

### ಪದಚ್ಯುತಿ ಸನ್ನಿಹಿತ

ಪರಿಷತ್ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಬಿಜೆಪಿ ತಂದಿರುವ ಅವಿಶ್ವಾಸ ನಿರ್ಣಯಕ್ಕೆ ಜೆಡಿಎಸ್ ಅಧಿಕೃತವಾಗಿ ಬೆಂಬಲಿಸಿದೆ. ಹಾಗಾಗಿ ಸಂಖ್ಯಾಬಲದಂತೆ ಸಭಾಪತಿ ಪದಚ್ಯುತಿ ಸನ್ನಿಹಿತವಾಗಿದೆ. 75 ಸದಸ್ಯ ಬಲದ ಮೇಲ್ಮನೆಯಲ್ಲಿ ಬಿಜೆಪಿ 31 ಜೆಡಿಎಸ್ 14 ಸದಸ್ಯರಿದ್ದಾರೆ.